**ದಿನಾಂಕ 29-8-2017 ರಂದು ಮಧ್ಯಾಹ್ನ 10.30 ಗಂಟೆಗೆ ಕೊಠಡಿ ಸಂ. 252, ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 32ನೇ ಸಭೆಯ ನಡುವಳಿಗಳು:**

**ಉಪಸ್ಥಿತರು:**

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಶ್ರೀ ಎಂ. ಮಹೇಶ್ವರ ರಾವ್, ಭಾಆಸೇ., ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರಕಾರ | ಸದಸ್ಯರು |
| 3. | ಶ್ರೀ ಕೆ. ಮುರಳೀಧರ, ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರಕಾರ (ಆರ್ಥಿಕ ಇಲಾಖೆಯ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಅವರಿಂದ ನಾಮನಿರ್ದೇಶಿತ) | ಸದಸ್ಯರು |
| 4. | ಶ್ರೀ ಅಮರೇಶ ಬಲ್ಲಿದವ (ಸರಕಾರದಿಂದ ನಾಮನಿರ್ದೇಶಿತ) | ಸದಸ್ಯರು |
| 5. | ಶ್ರೀ ಸಿದ್ದಪ್ಪ ಭಂಡಾರಿ (ಸರಕಾರದಿಂದ ನಾಮನಿರ್ದೇಶಿತ) | ಸದಸ್ಯರು |
| 6. | ಶ್ರೀ ವೀರನಗೌಡ ಪರಸರೆಡ್ಡಿ (ಸರಕಾರದಿಂದ ನಾಮನಿರ್ದೇಶಿತ) | ಸದಸ್ಯರು |
| 7. | ಶ್ರೀ ರಾಜಶೇಖರ ಬಸವರಾಜ ಪಾಟೀಲ, ಮಾನ್ಯ ಶಾಸಕರು, ಹುಮ್ನಾಬಾದ ಕ್ಷೇತ್ರ, (ಕರ್ನಾಟಕ ರಾಜ್ಯ ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರವರಿಂದ ನಾಮನಿರ್ದೇಶಿತ) | ಸದಸ್ಯರು |
| 8. | ಡಾ. ಎಂ. ಶೇಖರಗೌಡ, (ಮಾನ್ಯ ಕುಲಾಧಿಪತಿಯವರಿಂದ ನಾಮನಿರ್ದೇಶಿತ) | ಸದಸ್ಯರು |
| 9. | ಶ್ರೀಮತಿ ಹೇಮಾವತಿ ಲಂಕೇಶ, (ಮಾನ್ಯ ಕುಲಾಧಿಪತಿಯವರಿಂದ ನಾಮನಿರ್ದೇಶಿತ) | ಸದಸ್ಯರು |
| 10. | ಶ್ರೀ ಗುತ್ತಿ ಜಂಬುನಾಥ, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಕೃಷಿ ವಿಶ್ವವಿದ್ಯಾಲಯಕ್ಕೆ ನೂತನವಾಗಿ ಕುಲಸಚಿವರಾಗಿ ಕರ್ತವ್ಯ ವಹಿಸಿಕೊಂಡ ಶ್ರೀ ಗುತ್ತಿ ಜಂಬುನಾಥ್‌ರವರನ್ನು ಹಾಜರಿದ್ದ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಪರಿಚಯಿಸಿ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ 32ನೇ ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು.

ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ವಿಷಯಗಳನ್ನು ಚರ್ಚಿಸಿ ಠರಾಯಿಸಲಾಯಿತು:

| | |
|---|---|
| ಐಟಂ-1 | **ದಿನಾಂಕ 22-7-2017 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 31ನೇ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 22-7-2017 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 31ನೇ ಸಭೆಯ ನಡುವಳಿಗಳನ್ನು ಸ್ಥಿರೀಕರಿಸಲಾಯಿತು. |
| ಐಟಂ-2 | **ದಿನಾಂಕ 22-7-2017 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ 31ನೇ ಸಭೆಯ ನಡುವಳಿಗಳ ಮೇಲೆ ಕೈಗೊಂಡ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು**<br><br>**ಐಟಂ ಸಂಖ್ಯೆ : 2** ಮಾನ್ಯ ಕುಲಾಧಿಪತಿ ಹಾಗೂ ಕರ್ನಾಟಕ ಸರಕಾರದಿಂದ ನಾಮ ನಿರ್ದೇಶಿತಗೊಂಡ ಮಾನ್ಯ ಸದಸ್ಯರು ತಮ್ಮ ಪ್ರಯಾಣ ಭತ್ಯೆ / ದಿನಭತ್ಯೆ ನೀಡುವ ಅಂಶವು ಇನ್ನೂ ಇತ್ಯರ್ಥವಾಗದಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>**ಠರಾವು:** ಮಾನ್ಯ ನಾಮನಿರ್ದೇಶಿತ ಸದಸ್ಯರ ಪ್ರಯಾಣ ಭತ್ಯೆ / ದಿನಭತ್ಯೆ ನೀಡುವ ಕುರಿತು ಆರ್ಥಿಕ ಇಲಾಖೆಯು ಹೊರಡಿಸಿರುವ ಸುತ್ತೋಲೆಯನ್ನು ಕೂಡಲೇ ಪಡೆದು, ಆ ಪ್ರಕಾರ ಸೂಕ್ತ ಕ್ರಮವಿಡಲು ಠರಾಯಿಸಲಾಯಿತು.<br><br>(ಕ್ರಮ: ಕುಲಸಚಿವರು) |

| | |
|---|---|
| | **ಐಟಂ ಸಂಖ್ಯೆ : 8** ಮಾನ್ಯ ಸದಸ್ಯರಾದ ಡಾ॥ ಎಂ. ಶೇಖರಗೌಡರವರು ನಿವೃತ್ತಿ ಹೊಂದಿದ ನೌಕರರನ್ನು ಪುನರ್ ನೇಮಕ ಮಾಡಿಕೊಳ್ಳದಿರುವಂತೆ ಸರಕಾರದ ದಿನಾಂಕ 29–2–2016 ರ ಸುತ್ತೋಲೆ ಇದ್ದಾಗ್ಯೂ ರಾಯಚೂರು ಕೃವಿವಿ., ಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ವಿದ್ಯುತ್) ಹುದ್ದೆಗೆ 31–7–2017 ರಂದು ಸೇವಾ ನಿವೃತ್ತಿ ಹೊಂದಿದ ಶ್ರೀ ಶಂಕರ ಇವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಠರಾವು: ವಿಷಯದ ಬಗ್ಗೆ ಚರ್ಚಿಸಿ, ಕರ್ನಾಟಕ ಸರಕಾರದ ಸುತ್ತೋಲೆ ಸಿಆಸುಇ 588 ಸೇನೆನಿ 2015 ದಿನಾಂಕ 29–2–2016 ಅನ್ವಯ ನಿವೃತ್ತಿ ಹೊಂದಿದ ನೌಕರರ ಪುನರ್ ನೇಮಕ ಮತ್ತು ಸರಕಾರಿ ನೌಕರರ ನಿವೃತ್ತಿ ನಂತರ ಸೇವಾವಧಿಯನ್ನು ವಿಸ್ತರಿಸದಿರುವ ಬಗ್ಗೆ ಇರುವ ನಿರ್ದೇಶನದನ್ವಯ ಶ್ರೀ ಶಂಕರರವರ ಪುನರ್ ನೇಮಕವನ್ನು ಅವರ ಪುನರ್ ನೇಮಕದ ದಿನಾಂಕದಿಂದ ಮೂರು ತಿಂಗಳ ನಂತರ ಕೊನೆಗೊಳಿಸಲು ನಿರ್ಧರಿಸಲಾಯಿತು. (ಕ್ರಮ: ಕುಲಸಚಿವರು)<br><br>**ಐಟಂ ಸಂಖ್ಯೆ : 10** ನಾಮ ನಿರ್ದೇಶಿತ ಮಾನ್ಯ ಸದಸ್ಯರು ಉತ್ತರ ಭಾರತದ ತಮ್ಮ ಉದ್ದೇಶಿತ ಪ್ರವಾಸದ ಪ್ರಯಾಣವನ್ನು ಸೆಪ್ಟಂಬರ್ ಕೊನೆಯ ವಾರದಲ್ಲಿ ಅಥವಾ ಅಕ್ಟೋಬರ್ ತಿಂಗಳ ಮೊದಲ ಪಾಕ್ಷಿಕದಲ್ಲಿ ಕೈಗೊಳ್ಳುವ ಬಗ್ಗೆ ಹಾಗೂ ಇಸ್ರೇಲ್ ದೇಶಕ್ಕೆ ಪಯಣಿಸುವ ಸಂಬಂಧದ ಸ್ಥಿತಿಗತಿಯನ್ನು ತಿಳಿಯಬಯಸಿದರು.<br><br>ಠರಾವು: ಸೂಕ್ತ ಚರ್ಚೆಯ ನಂತರ, ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಎ.ಡಿ.ಜಿ. (ಮಾನವ ಸಂಪನ್ಮೂಲ) ಹಾಗೂ ಮಂಡಳಿಯ ಸದಸ್ಯರಾದ ಡಾ॥ ಎಂ.ಬಿ. ಚಟ್ಟಿಯವರಿಗೆ ಉತ್ತರ ಭಾರತದ ಪ್ರವಾಸವನ್ನು ಮಾನ್ಯ ಸದಸ್ಯರ ಕೋರಿಕೆಯಂತೆ 2017ರ ಸೆಪ್ಟಂಬರ್ ಕೊನೆಯ ವಾರ ಅಥವಾ ಅಕ್ಟೋಬರ್ ತಿಂಗಳ ಮೊದಲ ಪಾಕ್ಷಿಕದಲ್ಲಿ ಕೈಗೊಳ್ಳುವ ಕುರಿತು ಸೂಕ್ತ ಕ್ರಮವಿಡುವಂತೆ ಕೋರಲು ಹಾಗೂ ಮಾನ್ಯ ಸದಸ್ಯರ ಇಸ್ರೇಲ್ ದೇಶದ ಪ್ರವಾಸದ ಸಂಬಂಧ ಸರಕಾರದ ಅನುಮತಿ ಪಡೆಯುವಂತೆ ಕ್ರಮವಿಡಲು ನಿರ್ಧರಿಸಲಾಯಿತು. (ಕ್ರಮ: ಕುಲಸಚಿವರು) |
| ಐಟಂ–3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕ / ವಿಜ್ಞಾನಿ ಸಿಬ್ಬಂದಿಯವರು ಸಲ್ಲಿಸಿದ ರಾಜಿನಾಮೆಗಳನ್ನು ಅಂಗೀಕರಿಸುವ ಕುರಿತು (ಅನುಸಮರ್ಥನೆ).**<br><br>ಠರಾವು: ವಿವರವಾದ ಚರ್ಚೆಯ ನಂತರ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಡಾ॥ ಎಸ್.ಎ. ಬಿರಾದಾರ, ಡಾ॥ ಜಿ.ಎಸ್. ಗುರುಪ್ರಸಾದ್, ಡಾ॥ ರಾಜೀವ್ ಕುಮಾರ್ ಬಿ. ನೆಗಳೂರು, ಡಾ॥ ಹೆಚ್. ಲೋಕೇಶ್ ಹಾಗೂ ಡಾ॥ ಕೆ. ತಮಿಳ್‌ವೆಂಡನ್ ನೀಡಿದ ರಾಜಿನಾಮೆಗಳನ್ನು ಅಂಗೀಕರಿಸಿದ ಕ್ರಮಕ್ಕೆ ಅನುಸಮರ್ಥನೆ ನೀಡಿ, ಇನ್ನು ಮುಂದೆ ಬೋಧಕ ಸಿಬ್ಬಂದಿಯವರು ಉನ್ನತ ವ್ಯಾಸಂಗಕ್ಕೆ ನಿಯೋಜನೆ ಮೇರೆಗೆ ತೆರಳುವ ಮುನ್ನ ಅವರಿಂದ ಪಡೆಯಲಾಗುವ ಬಂಧಪತ್ರ (ಬಾಂಡ್)ದಲ್ಲಿಯ ಷರತ್ತುಗಳನ್ನು ಸೂಕ್ತ ಕಾನೂನು ಸಲಹೆ ಪಡೆದು, ಪರಿಷ್ಕರಿಸಿ, ರಾಜಿನಾಮೆ ನೀಡುವುದನ್ನು ಸೂಕ್ತವಾಗಿ ಪ್ರತಿಬಂಧಿಸುವಂತೆ ಠರಾಯಿಸಲಾಯಿತು.<br>(ಕ್ರಮ: ಕುಲಸಚಿವರು) |
| ಐಟಂ–4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸಹಾಯಕ ಪ್ರಾಧ್ಯಾಪಕರು, ಸಹ–ಪ್ರಾಧ್ಯಾಪಕರು, ಪ್ರಾಧ್ಯಾಪಕರು ಮತ್ತು ಇತರೆ ತತ್ಸಮಾನ ಹುದ್ದೆಗಳಿಗೆ ನಡೆದ ನೇರ ನೇಮಕಾತಿಗೆ ಅನುಮೋದನೆ ನೀಡುವುದು.**<br><br>ಆರಂಭದಲ್ಲಿ, ಮಾನ್ಯ ರಾಜ್ಯಪಾಲರ ಅಧೀನ ಕಾರ್ಯದರ್ಶಿಯವರ ಪತ್ರ ಸಂಖ್ಯೆ ಜಿಎಸ್ 05 ಎಯುಆರ್ 2016 ದಿನಾಂಕ 26–11–2016 ಹಾಗೂ ಕೃಷಿ ಇಲಾಖೆಯ ಅಧೀನ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ ಕೃಇ 36 ಕೃವಿರಾ 2016 ದಿನಾಂಕ 17–3–2017 ಗಳನ್ವಯ ರಾಯಚೂರು ಕೃವಿವಿ., ನಲ್ಲಿ 204 ಬೋಧಕ ಸಿಬ್ಬಂದಿಯ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬಗ್ಗೆ ಅನುಮೋದನೆ ದೊರೆತಿರುವುದನ್ನು ಮತ್ತು ಈ ಪೈಕಿ 89 ಸಹಾಯಕ ಪ್ರಾಧ್ಯಾಪಕರ, 45 ಸಹ ಪ್ರಾಧ್ಯಾಪಕರ ಹಾಗೂ 28 ಪ್ರಾಧ್ಯಾಪಕರ ಹುದ್ದೆಗಳನ್ನು ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುತ್ತಿರುವ ಅಂಶವನ್ನು ಸಭೆಯ ಗಮನಕ್ಕೆ ಕುಲಸಚಿವರು ತಂದರು.<br><br>ವಿಷಯದ ಬಗ್ಗೆ ಮಾನ್ಯ ಕುಲಪತಿಗಳು / ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಹಾಗೂ ಆಯ್ಕೆ ಸಮಿತಿಯ ಅಧ್ಯಕ್ಷರು ಈ ಕೆಳಗಿನ ವಿವರಗಳನ್ನು ಸಭೆಯ ಗಮನಕ್ಕೆ ತಂದರು: |

| | |
|---|---|
| | ಎ. ಬೆಳೆ ಶರೀರಶಾಸ್ತ್ರ, ಗೃಹ ವಿಜ್ಞಾನ / ಆಹಾರ ಮತ್ತು ಪೌಷ್ಠಿಕತೆ, ರೇಷ್ಮೆ ಹಾಗೂ ಪರಿಸರ ವಿಜ್ಞಾನಗಳು – ಈ ವಿಷಯಗಳಲ್ಲಿ ಯಾವುದೇ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲವೆಂದೂ,<br><br>ಬಿ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದ ಮಧ್ಯಂತರ ಆದೇಶಗಳನ್ವಯ ತೋಟಗಾರಿಕೆಯ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಸಂದರ್ಶನಕ್ಕೆ ಡಾ॥ ಕಪಿಲ್ ಪಾಟೀಲ್ ಹಾಗೂ ಡಾ॥ ಕುಶಲ್ ಇವರನ್ನು, ಜಿ.ಪಿ.ಬಿ.ಯ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಸಂದರ್ಶನಕ್ಕೆ ಡಾ॥ ವಿ. ಹನುಮಂತ ನಾಯ್ಕ್ ಇವರನ್ನು ಅನುಮತಿಸಿದ್ದು, ಈ ಅಭ್ಯರ್ಥಿಗಳ ನೇಮಕಾತಿ ಆದೇಶಗಳನ್ನು ಅವರ ರಿಟ್ ಅರ್ಜಿಗಳು ಅಂತಿಮ ತೀರ್ಮಾನವಾಗುವವರೆಗೂ ತಡೆಹಿಡಿಯಲಾಗಿದೆಯೆಂದೂ,<br><br>ಸಿ. ತನ್ನ ಈಗಿನ ಉದ್ಯೋಗದಾತನಿಂದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸದ ಕಾರಣ ಮೀನುಗಾರಿಕೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಯಾದ ಶ್ರೀ ಬಿ. ಮಲ್ಲೇಶ್ ಇವರಿಗೆ ನೇಮಕಾತಿ ಆದೇಶವನ್ನು ನೀಡಲಾಗಿಲ್ಲವೆಂದೂ ಸಭೆಯ ಗಮನಕ್ಕೆ ತರುತ್ತಾ, ಮಾನ್ಯ ಅಧ್ಯಕ್ಷರು ವಿವಿಧ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇರ ನೇಮಕಾತಿ ಮುಖಾಂತರ ಮಾಡಲಾದ ನೇಮಕಾತಿಗಳನ್ನು ಸಭೆಯ ಅನುಮೋದನೆಗೆ ಮಂಡಿಸಿದರು.<br><br>ಠರಾವು: ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅಧ್ಯಕ್ಷರ ಮೇಲಿನ ಮಂಡನಾ ಕ್ರಮಗಳನ್ನು ಅನುಸಮರ್ಥಿಸಿ, ವಿವಿಧ ವಿಷಯಗಳಲ್ಲಿ ಇರುವ ರಿಕ್ತ ಸ್ಥಾನಗಳ ಬಗ್ಗೆ ಕಳವಳ ವ್ಯಕ್ತಪಡಿಸುತ್ತಾ, ಈ ರಿಕ್ತ ಸ್ಥಾನಗಳನ್ನು ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡುವ ಕುರಿತು ಕೂಡಲೇ ಹೊಸ ಅಧಿಸೂಚನೆಗಳನ್ನು ಹೊರಡಿಸುವಂತೆ ಕ್ರಮವಿಡಲು ಠರಾಯಿಸಿತು.<br><br>ಇತರೆ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಪ್ರಚಲಿತವಿರುವಂತೆ, ವಿವಿಧ ವಿಷಯಗಳ ಸಂಬಂಧ ಒಂದೇ ರೋಸ್ಟರ್ ನೋಂದಣಿ ವಹಿಗಳನ್ನು ನಿರ್ವಹಿಸುತ್ತಿದ್ದಲ್ಲಿ, ಅಂತಹ ವಿಷಯಗಳನ್ನು ಒಗ್ಗೂಡಿಸಿ, ಮುಖ್ಯ ಕೃಷಿ ಸಂಶೋಧನಾ ಕೇಂದ್ರ / ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಇಂಟರ್–ಸೇ ಅರ್ಹತೆ ಆಧರಿಸಿ ನೇಮಕಾತಿ ಮಾಡಿಕೊಳ್ಳುವಂತೆ ನಿರ್ಧರಿಸಲಾಯಿತು (ಉದಾ: ಕೃಷಿ ತಾಂತ್ರಿಕತೆ, ಪಶು ವಿಜ್ಞಾನ / ಪಶು ಸಂಗೋಪನಾ ವಿಜ್ಞಾನ / ಕುಕ್ಕುಟ ವಿಜ್ಞಾನ, ಕೃಷಿ ಮೈಕ್ರೋಬಯಾಲಜಿ/ ಆಹಾರ ಮೈಕ್ರೋಬಯಾಲಜಿ, ಕೃಷಿ ಅರಣ್ಯಶಾಸ್ತ್ರ / ಕ್ಷೇತ್ರ ಅರಣ್ಯಶಾಸ್ತ್ರ, ಗೃಹ ವಿಜ್ಞಾನ / ಆಹಾರ ಮತ್ತು ಪೌಷ್ಠಿಕತೆ)<br><br>ಮುಂದುವರೆದು, ಮಹಾವಿದ್ಯಾಲಯಗಳಲ್ಲಿ ಪ್ರತ್ಯೇಕ ಸಹಾಯಕ ಪ್ರಾಧ್ಯಾಪಕರ ಹುದ್ದೆ ಇದ್ದಲ್ಲಿ, ಅಂತಹ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಪ್ರತ್ಯೇಕ ಅಧಿಸೂಚನೆಯನ್ನು ಹೊರಡಿಸುವಂತೆ ನಿರ್ಧರಿಸಲಾಯಿತು (ಉದಾ: ರಾಯಚೂರಿನ ಕೃಷಿ ತಾಂತ್ರಿಕತೆ ಮಹಾವಿದ್ಯಾಲಯದಲ್ಲಿ ಆಹಾರ ಸಂಸ್ಕರಣೆ ಮತ್ತು ತಾಂತ್ರಿಕತೆ).<br><br>ಆಯ್ಕೆ ಸಮಿತಿಯು ಮಾಡಿದ ಈ ಕೆಳಕಂಡ ನೇಮಕಾತಿಗಳನ್ನು ಅನುಮೋದಿಸಿ, ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮತಿಸಿತು :<br><br>1. ಸಹಾಯಕ ಪ್ರಾಧ್ಯಾಪಕರು (ಕೃಷಿ ಅರ್ಥಶಾಸ್ತ್ರ) : ಸಾಅ–2 (ಮ–1/ಗ್ರಾ–1), ಪಜಾ–1, ಪಪಂ–1 ಹಾಗೂ ವರ್ಗ.1–1)<br>ಸತೀಶ್‌ಕುಮಾರ ಎಮ್. – ಸಾ.ಅ. (ಸಾಮಾನ್ಯ (ಮ) ಕೋಟಾದಡಿಯಲ್ಲಿ ಯಾವ ಅಭ್ಯರ್ಥಿಯು ಅರ್ಹರಿಲ್ಲದ ಕಾರಣ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗಿದೆ)<br>ಜೈನುದ್ದೀನ್ ಮುಲ್ಲ – ಸಾ.ಅ (ಗ್ರಾ)<br>ವಿಜಯಚಂದ್ರ ರೆಡ್ಡಿ – ಪಜಾ.<br>ವಾಸುದೇವ್ ನಾಯಕ್ – ಪ.ಪಂ.<br>ವರ್ಗ.1 ಕೋಟಾದಡಿಯಲ್ಲಿ ಯಾವ ಅರ್ಹ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ. |

2. ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) : ಸಾಅ–2 (ಗ್ರಾ–1/ಅಂ–1), ಪಪಂ–1
ಶೋಭರಾಣಿ – ಸಾ.ಅ. (ಸಾಮಾನ್ಯ ಅಭ್ಯರ್ಥಿ (ಅಂ) ಕೋಟಾದಡಿಯಲ್ಲಿ ಯಾವ ಅಭ್ಯರ್ಥಿಯು ಅರ್ಹರಿಲ್ಲದ ಕಾರಣ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗಿದೆ)
ಶ್ರೀ. ಬಸವರಾಜ – ಸಾ.ಅ.(ಗ್ರಾ) ಇವರ ನೇಮಕಾತಿಯು ಮೇಲುಸ್ತರ ಪ್ರಮಾಣ ಪತ್ರ ಸಲ್ಲಿಸುವ ಷರತ್ತಿಗೊಳಪಟ್ಟಿದೆ.
ಶ್ರೀವಾಣಿ – ಪಪಂ.

3. ಸಹಾಯಕ ಪ್ರಾಧ್ಯಾಪಕರು (ಕೃಷಿ ಮೈಕ್ರೋಬಯಲೋಜಿ / ಆಹಾರ ಮೈಕ್ರೋಬಯಲೋಜಿ: ಸಾ.ಅ.–3 (ಮ–1/ಗ್ರಾ–1/ಅಂ–1), ಪ.ಜಾ.–2 (ಮ–1), ಪಪಂ.–1, ವರ್ಗ.1–1, ವರ್ಗ2ಎ–1.
ಶ್ವೇತ ಮೇಟಿ – ಸಾ.ಅ.(ಮ)
ಐ. ಬಾಲಕೃಷ್ಣರೆಡ್ಡಿ – ಸಾ.ಅ.(ಗ್ರಾ)
ಚೆನ್ನಪ್ಪ – ಸಾ.ಅ. (ಸಾಮಾನ್ಯ ಅಭ್ಯರ್ಥಿ(ಅಂ) ಕೋಟಾದಡಿಯಲ್ಲಿ ಯಾವ ಅಭ್ಯರ್ಥಿಯು ಅರ್ಹರಿಲ್ಲದ ಕಾರಣ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗಿದೆ)
ಯಲ್ಲಪ್ಪ ಎಮ್. – ಪ.ಜಾ.
ಪಂಪನಗೌಡ – ವರ್ಗ–2ಎ
ಪ.ಜಾ(ಮ), ಪ.ಪಂ. ಮತ್ತು ವರ್ಗ.1 ಕೋಟಾದಡಿಯಲ್ಲಿ ಯಾವ ಅರ್ಹ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ.

4. ಸಹಾಯಕ ಪ್ರಾಧ್ಯಾಪಕರು (ಬೇಸಾಯಶಾಸ್ತ್ರ) : ಸಾಅ–1 (ಮ–1)
ಆನಂದ ಪೋಲಿಸ್ ಪಾಟೀಲ್ – ಸಾಮಾನ್ಯ (ಸಾಮಾನ್ಯ (ಮ) ಕೋಟಾದಡಿಯಲ್ಲಿ ಯಾವ ಅಭ್ಯರ್ಥಿಯು ಅರ್ಹರಿಲ್ಲದ ಕಾರಣ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗಿದೆ)

5. ಸಹಾಯಕ ಪ್ರಾಧ್ಯಾಪಕರು (ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ) : ಸಾಅ–3 (ಮ–1/ಗ್ರಾ–1/ಅಂ–1), ಪಜಾ–2 (ಮ–1), ಪಪಂ–1, ವರ್ಗ.1–1.
ಕುಮಾರಿ ಬಸಮ್ಮ – ಸಾ.ಅ(ಮ)
ಲಕ್ಷ್ಮಣ – ಸಾ.ಅ.(ಗ್ರಾ)
ರಾಜ್‌ಕುಮಾರ – ಪ.ಜಾ
ಶಿವಕುಮಾರ – ಪಜಾ (ಪರಿಶಿಷ್ಟ ಜಾತಿ (ಮ) ಕೋಟಾದಡಿಯಲ್ಲಿ ಯಾವ ಅಭ್ಯರ್ಥಿಯು ಅರ್ಹರಿಲ್ಲದ ಕಾರಣ ಪರಿಶಿಷ್ಟ ಜಾತಿ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗಿದೆ)
ಪ್ರವೀಣಕುಮಾರ – ಪಪಂ
ವರ್ಗ.1 ಕೋಟಾದಡಿಯಲ್ಲಿ ಯಾವ ಅರ್ಹ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ.

6. ಸಹಾಯಕ ಪ್ರಾಧ್ಯಾಪಕರು (ತೋಟಗಾರಿಕೆ) : ಸಾಅ–4 (ಮ–1/ಗ್ರಾ–1/ಅಂ–1), ವರ್ಗ.1–1, ವರ್ಗ2ಎ.
ರೇಖಾ, ಬಿ. – ಸಾ.ಅ.(ಗ್ರಾ)
ಸತೀಶ್‌ಕುಮಾರ್ ಖಾಲೆ – ಸಾ.ಅ. (ಸಾಮಾನ್ಯ ಅಭ್ಯರ್ಥಿ(ಅಂ) ಕೋಟಾದಡಿಯಲ್ಲಿ ಯಾವ ಅಭ್ಯರ್ಥಿಯು ಅರ್ಹರಿಲ್ಲದ ಕಾರಣ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗಿದೆ)
ಚೇತನ್, ಟಿ. – ವರ್ಗ1
ರವಿ ಪ್ರಜಾರಿ – ವರ್ಗ2ಎ

7. ಸಹಾಯಕ ಪ್ರಾಧ್ಯಾಪಕರು (ಸಸ್ಯ ರೋಗಶಾಸ್ತ್ರ) : ಸಾಅ–1 (ಮ–1), ಪ.ಜಾ.–1
ಪೂರ್ಣಿಮ – ಸಾ.ಅ. (ಮ)
ಹನುಮಂತ – ಪ.ಜಾ.

8. ಸಹಾಯಕ ಪ್ರಾಧ್ಯಾಪಕರು (ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ) : ಸಾಅ–2 (ಮ–1 / ಗ್ರಾ–1), ವರ್ಗ.1–1

ಉಮೇಶ – ಸಾ.ಅ. (ಸಾಮಾನ್ಯ (ಮ) ಕೋಟಾದಡಿಯಲ್ಲಿ ಯಾವ ಅಭ್ಯರ್ಥಿಯು ಅರ್ಹರಿಲ್ಲದ ಕಾರಣ ಸಾಮಾನ್ಯ ಅಭ್ಯರ್ಥಿಗೆ ಪರಿವರ್ತಿಸಲಾಗಿದೆ)

ಜ್ಞಾನದೇವ – ಸಾ.ಅ. (ಗ್ರಾ)

ಮಾರುತಿ, ಕೆ. – ವರ್ಗ1

9. ಸಹಾಯಕ ಪ್ರಾಧ್ಯಾಪಕರು (ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ) : ಸಾಅ–1 (ಮ–1), ಪ.ಜಾ.–1, ಪ.ಪಂ.–1

ಶರಣಬೋಪಾಲರೆಡ್ಡಿ – ಸಾ.ಅ. (ಸಾಮಾನ್ಯ (ಮ) ಕೋಟಾದಡಿಯಲ್ಲಿ ಯಾವ ಅಭ್ಯರ್ಥಿಯು ಅರ್ಹರಿಲ್ಲದ ಕಾರಣ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗಿದೆ)

ಪಜಾ(ಮ) ಮತ್ತು ಪಪಂ ಕೋಟಾದಡಿಯಲ್ಲಿ ಯಾವ ಅರ್ಹ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ.

10. ಸಹಾಯಕ ಪ್ರಾಧ್ಯಾಪಕರು (ಪಶು ವಿಜ್ಞಾನ / ಪಶು ಸಂಗೋಪನೆ / ಕುಕ್ಕುಟ ವಿಜ್ಞಾನ) : ಸಾಅ–1 (ಮ–1), ಪ.ಜಾ.–1, ಪ.ಪಂ.–1, ವರ್ಗ1–1

ಅಣ್ಣಪೂರ್ಣ ಅವಾಟಿ – ಸಾ.ಅ. (ಮ)

ಮಹೇಶ – ವರ್ಗ1

ಪಜಾ(ಮ) ಮತ್ತು ಪಪಂ ಕೋಟಾದಡಿಯಲ್ಲಿ ಯಾವ ಅರ್ಹ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ.

11. ಸಹಾಯಕ ಪ್ರಾಧ್ಯಾಪಕರು (ಕೃಷಿ ಅರಣ್ಯ ಶಾಸ್ತ್ರ / ಕ್ಷೇತ್ರ ಅರಣ್ಯ ಶಾಸ್ತ್ರ) : ಸಾ–1 (ಮ–1), ಪ.ಜಾ.–1, ಪ.ಪಂ. ವರ್ಗ1–1

ವೀರೇಶಗೌಡ – ಸಾ.ಅ. (ಸಾ.ಅ.(ಮ) ಕೋಟಾದಡಿಯಲ್ಲಿ ಯಾವ ಅಭ್ಯರ್ಥಿಯು ಅರ್ಹರಿಲ್ಲದ ಕಾರಣ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗಿದೆ)

ಪಜಾ, ಪಪಂ ಮತ್ತು ವರ್ಗ1 ಕೋಟಾದಡಿಯಲ್ಲಿ ಯಾವ ಅರ್ಹ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ.

12. ಸಹಾಯಕ ಪ್ರಾಧ್ಯಾಪಕರು (ಸಂಖ್ಯಾಶಾಸ್ತ್ರ) : ಸಾ–2 (ಮ–1), ಪ.ಜಾ.–1, ಪ.ಪಂ.–1

ಮನೋಜಕುಮಾರ್ – ಸಾ.ಅ.

ಸಾ.ಅ. (ಮ), ಪ.ಜಾ., ಮತ್ತು ಪ.ಪಂ ಕೋಟಾದಡಿಯಲ್ಲಿ ಯಾವ ಅರ್ಹ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ.

13. ಸಹಾಯಕ ಪ್ರಾಧ್ಯಾಪಕರು (ಜೀವ ರಸಾಯನಶಾಸ್ತ್ರ) : ಸಾ.ಅ.–2 (ಮ–1), ಪ.ಜಾ.–1, ಪ.ಪಂ.–1

ನಾಗನಗೌಡ – ಸಾ.ಅ.

ಸರೋಜ ನರಸಿಂಹ್ ರಾವ್ – ಸಾ.ಅ.(ಮ)

ತ್ರಿವೇಣಿ – ಪ.ಜಾ.

ಲಕ್ಷ್ಮಿಕಾಂತ್, ಎಂ. – ಪ.ಪಂ.

14. ಸಹಾಯಕ ಪ್ರಾಧ್ಯಾಪಕರು (ಸಸ್ಯ ಜೈವಿಕ ತಂತ್ರಜ್ಞಾನ) : ಸಾ.ಅ.–1, ಪ.ಪಂ.–1

ಶರಣಬಸಪ್ಪ ಯರ್ರಿ – ಸಾ.ಅ.

ರಮೇಶ್ – ಪ.ಪಂ.

15. ಸಹಾಯಕ ಪ್ರಾಧ್ಯಾಪಕರು (ಕೃಷಿ ತಾಂತ್ರಿಕತೆ) (ಎಫ್.ಎಂ.ಪಿ–2/ಎಸ್.ಡಬ್ಲ್ಯೂ.ಇ–2/ಪಿ.ಎಫ್.ಇ–1) : ಸಾ–2 (ಮ–1 / ಗ್ರಾ–1), ಪ.ಪಂ.–1, ವರ್ಗ1–1, 2ಎ–1

ಸುಧಾದೇವಿ (ಪಿ.ಎಫ್.ಇ.) – ಸಾ.ಅ. (ಮ)

ಮಧುಸೂದನ್, ಎಂ.ಎಸ್. (ಎಸ್.ಡಬ್ಲ್ಯೂ.ಇ) – ಸಾ.ಅ. (ಗ್ರಾ)
ಬಾರಿಕರ ಉಮೇಶ್ (ಎಸ್.ಡಬ್ಲ್ಯೂ.ಇ) – ವರ್ಗ1
ಪ.ಪಂ ಮತ್ತು 2ಎ ಕೋಟಾದಡಿಯಲ್ಲಿ ಯಾವ ಅರ್ಹ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ.

16. ಸಹಾಯಕ ಪ್ರಾಧ್ಯಾಪಕರು (ಆಹಾರ ಸಂಸ್ಕರಣೆ ಮತ್ತು ತಾಂತ್ರಿಕತೆ) : ವರ್ಗ1–1,
ಸುಧಾದೇವಿ – ವರ್ಗ1

17. ಸಹಾಯಕ ಪ್ರಾಧ್ಯಾಪಕರು (ಕ್ಷೇತ್ರ ನಿರ್ವಹಣೆ / ಕ್ಷೇತ್ರ ವ್ಯವಸ್ಥಾಪಕರು) : ಸಾ.ಅ.–1, ಪ.ಜಾ.–1
ಉಮೇಶ – ಸಾ.ಅ.
ನಾಗೇಶ್ – ಪ.ಜಾ.

18. ಸಹಾಯಕ ಪ್ರಾಧ್ಯಾಪಕರು (ಅಗ್ರೋಮೆಟಿರೋಲಜಿ) : ಸಾ.ಅ.–1, ಪ.ಜಾ.–1
ಆನಂದ್ ಮೋಲೀಸ್ ಪಾಟೀಲ್ – ಸಾ.ಅ.
ವಿಶ್ವನಾಥ್, ಎಸ್. – ಪ.ಜಾ.

19. ಸಹಾಯಕ ಪ್ರಾಧ್ಯಾಪಕರು (ಕೃಷಿ ಮಾರುಕಟ್ಟೆ) : ಸಾ.ಅ.–1, ಪ.ಜಾ.–1
ಸತೀಶ್‌ಕುಮಾರ್, ಎಂ. – ಸಾ.ಅ.
ವಿಜಯಚಂದ್ರ ರೆಡ್ಡಿ – ಪ.ಜಾ.

20. ಸಹಾಯಕ ಪ್ರಾಧ್ಯಾಪಕರು (ಗಣಿತಶಾಸ್ತ್ರ) : ಪ.ಜಾ.–1
ರಾಜಶೇಖರ, ಎಂ. – ಪ.ಜಾ.

21. ಸಹಾಯಕ ಪ್ರಾಧ್ಯಾಪಕರು (ದೈಹಿಕ ಶಿಕ್ಷಣ) : ಸಾ.ಅ.–1, ಪ.ಜಾ.–1
ಪ್ರಸನ್ನಕುಮಾರ್ – ಸಾ.ಅ.
ರಾಜಕುಮಾರ್ ಗುರುಶಾಂತ್ ಕರ್ವೆ – ಪ.ಜಾ.

22. ಸಹಾಯಕ ಗ್ರಂಥಪಾಲಕ – ಪ.ಜಾ.–1
ಸಂಗೀತ ಗಾಯ್ಕವಾಡ – ಪ.ಜಾ.

ಕೃಷಿ ಇಲಾಖೆಯ ಮಾನ್ಯ ಕಾರ್ಯದರ್ಶಿಯವರ ಸಲಹೆ ಮೇರೆಗೆ ಪರಿಶಿಷ್ಟ ಜಾತಿಗೆ ಮೀಸಲಿರಿಸಿದ ಮಣ್ಣು ಮತ್ತು ನೀರು ತಂತ್ರಜ್ಞಾನದ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿಯ ಸಂಬಂಧ ರಾಯಚೂರು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಕಛೇರಿಯ ಪತ್ರಾಂಕಿತ ವ್ಯವಸ್ಥಾಪಕರು ನೀಡಿದ ಟಿಪ್ಪಣಿಯ ಕುರಿತು, ಕೃಷಿ ಇಲಾಖೆಯ ಮಾನ್ಯ ಕಾರ್ಯದರ್ಶಿಯವರ ಸಲಹೆ ಮೇರೆಗೆ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸರಕಾರದ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಂದ ಸೂಕ್ತ ಸ್ಪಷ್ಟೀಕರಣ ಪಡೆದು, ಕ್ರಮವಿಡುವಂತೆ ನಿರ್ಧರಿಸಲಾಯಿತು.

ಸಹಾಯಕ ಪ್ರಾಧ್ಯಾಪಕ (ಕೃಷಿ ವಿಸ್ತರಣಾ ಶಿಕ್ಷಣ) ಹುದ್ದೆಗೆ ನಡೆದ ನೇಮಕಾತಿಯ ಕಡತದ ಅಲಭ್ಯತೆಯ ಹಿನ್ನೆಲೆಯಲ್ಲಿ, ಸದರಿ ಹುದ್ದೆಯ ನೇಮಕಾತಿಯನ್ನು ಮುಂದೂಡಲು ಮಂಡಳಿಯು ತೀರ್ಮಾನಿಸಿತು.

ಸೂಕ್ತ ಚರ್ಚೆಯ ನಂತರ, ಸಹಾಯಕ ಪ್ರಾಧ್ಯಾಪಕ (ಗಣಕಯಂತ್ರ ವಿಜ್ಞಾನ ಹಾಗೂ ಭೌತಶಾಸ್ತ್ರ) ಹುದ್ದೆಯ ಸಂಬಂಧ ಆಯ್ಕೆ ಸಮಿತಿಯು ಮಾಡಿದ ಶಿಫಾರಸ್ಸನ್ನು ರದ್ದುಗೊಳಿಸಿ, ಗಣಕಯಂತ್ರ ವಿಜ್ಞಾನ ಹಾಗೂ ಭೌತಶಾಸ್ತ್ರ ವಿಷಯಗಳು ಪ್ರತ್ಯೇಕವಾಗಿದ್ದು, ಅವುಗಳನ್ನು ಒಗ್ಗೂಡಿಸದೇ, ಪ್ರತ್ಯೇಕವಾಗಿ ಪರಿಗಣಿಸಿ, ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗಾಗಿ ಮನಃ ನೇಮಕಾತಿ ಅಧಿಸೂಚನೆಯನ್ನು ಹೊರಡಿಸುವಂತೆ ನಿರ್ಧರಿಸಲಾಯಿತು.

ಸಹ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕರ ಹುದ್ದೆಗಳಿಗೆ ಇಂಟರ್–ಸೇ ಅರ್ಹತೆ ಆಧರಿಸಿ, ನೇಮಕಾತಿ ಮಾಡುವಂತೆ ಸೂಚಿಸಿ, ಸದರಿ ನೇಮಕಾತಿಗಳನ್ನು ತನ್ನ ಮುಂದಿನ ಸಭೆಯಲ್ಲಿ ಪರಿಗಣಿಸಲು ಮಂಡಳಿಯು ನಿರ್ಧರಿಸಿತು.

(ಕ್ರಮ: ಕುಲಸಚಿವರು)

**ಐಟಂ–5** ಸಿ.ಎ.ಎಸ್. 2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ / ವಿಜ್ಞಾನಿಗಳ ಪದೋನ್ನತಿಯ ಕುರಿತು ಅನುಮೋದನೆ ನೀಡುವುದು.

ಕೃಷಿ ಇಲಾಖೆಯ ಮಾನ್ಯ ಕಾರ್ಯದರ್ಶಿಯವರು ವಿಷಯಕ್ಕೆ ಸಂಬಂಧಿಸಿದಂತೆ ಸಿ.ಎ.ಎಸ್. 2006ರಡಿ ಶಿಕ್ಷಕರ ನೇರ ನೇಮಕಾತಿ ಮತ್ತು ಪದೋನ್ನತಿಯ ವಿನಿಯಮಗಳು, ಇದರ ವಿನಿಯಮ 3.2.4. ಪ್ರಕಾರ ಶಿಕ್ಷಕರು ತಮ್ಮ ಬಯೋ–ಡಾಟ ಸಲ್ಲಿಸುವ ದಿನಾಂಕವನ್ನು ಅವರ ಪದೋನ್ನತಿಯ ಅರ್ಹತಾ ದಿನಾಂಕವೆಂದು ಪರಿಗಣಿಸುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಠರಾವು: ಮಾನ್ಯ ವ್ಯವಸ್ಥಾಪನಾ ಮಂಡಳಿಯು ತನ್ನ ಮುಂದೆ ಮಂಡಿಸಲಾದ ಶಿಕ್ಷಕರ ಪದೋನ್ನತಿಯ ಪ್ರಕರಣಗಳನ್ನು ವಿನಿಯಮ 3.2.4. ರನ್ವಯ ಪರಿಶೀಲಿಸಲು ಉಪ ಸಮಿತಿಯನ್ನು ರಚಿಸುವಂತೆ ಮತ್ತು ಉಪ ಸಮಿತಿಯ ಶಿಫಾರಸ್ಸುಗಳನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ತೀರ್ಮಾನಿಸಿತು.

(ಕ್ರಮ: ಕುಲಸಚಿವರು)

## ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.

**ಐಟಂ–1** **ಗ್ರೂಪ್–ಸಿ ಹುದ್ದೆಗಳ ನೇಮಕಾತಿಗೆ ಸ್ಕೋರ್‌ಕಾರ್ಡ್ ಪದ್ಧತಿಯ ಬದಲಾಗಿ ಸ್ಪರ್ಧಾತ್ಮಕ ಪರೀಕ್ಷೆ / ಪ್ರಾಯೋಗಿಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳ ಆಯ್ಕೆ ಮಾಡಿಕೊಳ್ಳುವ ಪದ್ಧತಿಯನ್ನು ಅಳವಡಿಸಿಕೊಳ್ಳುವ ಕುರಿತು**

ದಿನಾಂಕ 8–3–2017ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕದ ಕೃಷಿ ವಿಶ್ವವಿದ್ಯಾಲಯಗಳ ಸಮನ್ವಯ ಸಮಿತಿಯ 25ನೇ ಸಭೆಯಲ್ಲಿ ಗ್ರೂಪ್–ಸಿ ಹುದ್ದೆಗಳ ನೇಮಕಾತಿಗೆ ಇದುವರೆಗೂ ಅಳವಡಿಸುತ್ತಿದ್ದ ಸ್ಕೋರ್‌ಕಾರ್ಡ್ ಪದ್ಧತಿಯನ್ನು ಕೈಬಿಟ್ಟು, ಸದರಿ ಹುದ್ದೆಗಳ ನೇಮಕಾತಿಗೆ ನಡೆಸಲಾಗುವ ಲಿಖಿತ ಪರೀಕ್ಷೆ / ಪ್ರಾಯೋಗಿಕ ಪರೀಕ್ಷೆ / ಕೌಶಲ್ಯ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳನ್ನಾಧರಿಸಿ, ಅರ್ಹತೆಯ ಮೇರೆಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ತೆಗೆದುಕೊಳ್ಳಲಾದ ನಿರ್ಧಾರವನ್ನು ಸಭೆಯ ಗಮನಕ್ಕೆ ಮಾನ್ಯ ಅಧ್ಯಕ್ಷರು ತಂದರು.

ಠರಾವು: ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಗ್ರೂಪ್– ಸಿ ಹುದ್ದೆಗಳ ನೇಮಕಾತಿಗೆ ಸ್ಕೋರ್‌ಕಾರ್ಡ್ ಪದ್ಧತಿಯ ಬದಲು, ಈ ಸಂಬಂಧ ನಡೆಸಲಾಗುವ / ನಡೆಸಿರುವ ಲಿಖಿತ ಪರೀಕ್ಷೆ / ಪ್ರಾಯೋಗಿಕ ಪರೀಕ್ಷೆ / ಕೌಶಲ್ಯ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳನ್ನಾಧರಿಸಿ, ಅರ್ಹತೆಯ ಮೇರೆಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ನಿರ್ಧರಿಸಲಾಯಿತು. (ಕ್ರಮ: ಕುಲಸಚಿವರು)

**ಐಟಂ–2** **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು.**

ಠರಾವು:

ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಈ ಕೆಳಕಂಡ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| Sl. No. | Name of the item | Qty. | Amount (Rs.) |
|---|---|---|---|
| 1 | Gas Chromatography with FID with Auto Sampler | 1 | 18,50,000.00 |
| 2 | High Performanace Liquid Chromatography with UV Detector | 1 | 18,50,000.00 |
| 3 | Fork Lift with accessories | 1 | 21,68,000.00 |
| 4 | Drone Mounted Sprayer (20 litre) | 1 | 16,50,000.00 |
| | **Total** | | **75,18,000.00** |

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ ಸರಕು ಖರೀದಿ ಅಧಿಕಾರಿ)

**ಐಟಂ-3** ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರು ರೂ. 25,000/- ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳಿಗೆ ಅನುಮೋದನೆ ನೀಡುವ ಕುರಿತು.

ಠರಾವು:

ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯು ಪರಿಶೀಲಿಸಿ, ಮೇಲುರುಜು ಮಾಡಿದ ಈ ಕೆಳಕಂಡ ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಮರುಪಾವತಿಗೆ ಘನ ವೇದಿಕೆಯು ಅನುಮೋದನೆ ನೀಡಿತು :

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀಮತಿ. ಮಂಗಳಮ್ಮ, ಕೃಷಿ ಕರ್ಮಿಕಳು, | 61,728/- |
| 2 | ಶ್ರೀ. ಪರಶುರಾಮ, ಹಿರಿಯ ಕ್ಷೇತ್ರ ಸಹಾಯಕರು, | 1,44,952/- |
| 3 | ಮಹಾದೇವಮ್ಮ ಗುರುಲಿಂಗಪ್ಪ, ಕೃಷಿ ಕಾರ್ಮಿಕರು, | 58,769/- |

ಚರ್ಚೆಯ ನಂತರ, ಸರಕಾರದಿಂದ ಮತ್ತು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳನ್ನು ಹೊರತುಪಡಿಸಿ ಇತರೇ ಆಸ್ಪತ್ರೆಗಳಲ್ಲಿ ತುರ್ತು ಸಂದರ್ಭಗಳಲ್ಲಿ ಚಿಕಿತ್ಸೆ ಪಡೆದ ಈ ಕೆಳಕಂಡ ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಮಾನ್ಯ ಮಂಡಳಿಯು ಅನುಮೋದನೆ ನೀಡಿತು:

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀ. ಸಿ .ಯು. ಕೊಟಬಾಗಿ,<br>ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು, | 2,41,658/- |
| 2 | ಶ್ರೀ. ಮೊಹಮ್ಮದ್ ಇಬ್ರಾಹಿಂ, ಶೀಘ್ರಲಿಪಿಗಾರರು, | 34,671/- |

(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು))

**ಐಟಂ 6** ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು

**ಎ. ದೇವದುರ್ಗದಲ್ಲಿ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರವನ್ನು ಸ್ಥಾಪಿಸುವ ಕುರಿತು.**

ಮಾನ್ಯ ಸದಸ್ಯರಾದ ಶ್ರೀ ಅಮರೇಶ ಬಲ್ಲಿದವ ಇವರು ದೇವದುರ್ಗದ ರೈತರಿಗೆ ಉತ್ತಮ ಬೇಸಾಯದ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ತಿಳುವಳಿಕೆ ನೀಡುವ ದೃಷ್ಟಿಯಿಂದ ದೇವದುರ್ಗದಲ್ಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವನ್ನು ಸ್ಥಾಪಿಸುವ ಅವಶ್ಯಕತೆಯನ್ನು ಸಭೆಯ ಮುಂದೆ ಮಂಡಿಸಿದರು.

ಠರಾವು : ಕೃಷಿ ವಿಸ್ತರಣಾ ಶಿಕ್ಷಣ ಪರಿಷತ್ ಮುಂದೆ ದೇವದುರ್ಗದಲ್ಲಿ ಕೃಷಿ ಶಿಕ್ಷಣ ಕೇಂದ್ರವನ್ನು ಸ್ಥಾಪಿಸುವ ಸಾಧಕ – ಬಾಧಕಗಳ ಬಗ್ಗೆ ವಿವರವಾಗಿ ಚರ್ಚಿಸಿ ಸೂಕ್ತ ಕ್ರಮವಿಡಲು ಮಂಡಳಿಯು ನಿರ್ಧರಿಸಿತು.

(ಕ್ರಮ : ವಿಸ್ತರಣಾ ನಿರ್ದೇಶಕರು)

**ಬಿ. ಗಂಗಾವತಿಯ ಕೃಷಿ ಸಂಶೋಧನಾ ಸಂಕೀರ್ಣದ ನಿರ್ಮಾಣದ ಸ್ಥಿತಿಗತಿ ಕುರಿತು.**

ಮಾನ್ಯ ಸದಸ್ಯರಾದ ಡಾ॥ ಶೇಖರಗೌಡ ರವರು ಗಂಗಾವತಿಯಲ್ಲಿ ಸ್ಥಾಪಿಸಲು ಉದ್ದೇಶಿಸಿದ ಕೃಷಿ ಸಂಶೋಧನಾ ಸಂಕೀರ್ಣದ ಸ್ಥಿತಿಗತಿಯ ಕುರಿತು ಇತ್ತೀಚಿನ ವರದಿ ಪಡೆಯಲಿಚ್ಚಿಸಿ, ನಿರ್ಮಾಣದ ಪ್ರಕ್ರಿಯೆಯನ್ನು ತ್ವರಿತಗೊಳಿಸುವಂತೆ ಆಗ್ರಹಿಸಿದರು.

ರೂ. 3.70 ಕೋಟಿ ಅಂದಾಜು ವೆಚ್ಚದಲ್ಲಿ ಗಂಗಾವತಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಕೃಷಿ ಸಂಶೋಧನಾ ಸಂಕೀರ್ಣದ ಸಂಬಂಧ ತಾಂತ್ರಿಕ ಪರಿಶೀಲನಾ ಸಮಿತಿಯು ಕೆಲವು ಬದಲಾವಣೆಗಳನ್ನು ಸೂಚಿಸಿದ್ದು, ಸದರಿ ಬದಲಾವಣೆಗಳನ್ನು ಅಳವಡಿಸಿ ಕೂಡಲೇ ಟೆಂಡರ್ ಕರೆಯಲಾಗುವುದೆಂದು ಸಭೆಯ ಗಮನಕ್ಕೆ ತರಲಾಯಿತು.

ಠರಾವು : ಸದರಿ ಸಂಕೀರ್ಣವನ್ನು ಶೀಘ್ರವಾಗಿ ನಿರ್ಮಿಸುವ ದೃಷ್ಟಿಯಿಂದ ಅಲ್ಪಾವಧಿಯ ಟೆಂಡರ್‌ರನ್ನು ಕರೆಯುವಂತೆ ಮಂಡಳಿಯು ಸೂಚಿಸಿತು. (ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

ಸಿ. ಚಿತ್ತಾಪೂರ ತಾಲೂಕಿನ ನಾಲವಾರದಲ್ಲಿ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರವನ್ನು ಸ್ಥಾಪಿಸುವ ಕುರಿತು.
ಮಾನ್ಯ ಸದಸ್ಯರಾದ ವೀರನಗೌಡ ಪರಸರೆಡ್ಡಿಯವರು ನಾಲವಾರದ ಸುತ್ತಮುತ್ತಲಿನ ಪ್ರದೇಶದಲ್ಲಿ ತೀವ್ರ ಕೃಷಿ ಪದ್ಧತಿಯನ್ನಳವಡಿಸಿ, ಹೆಚ್ಚುವರಿ ಇಳುವರಿಯನ್ನು ಪಡೆಯುವ ಸಂಬಂಧ, ಸ್ಥಳೀಯ ರೈತರಿಗೆ ಸೂಕ್ತ ತಿಳುವಳಿಕೆ ನೀಡಲು ನಾಲವಾರದ 100 ಎಕರೆ ಪ್ರದೇಶದಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು.

ಠರಾವು : ನಾಲವಾರದಲ್ಲಿ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರವನ್ನು ಸ್ಥಾಪಿಸುವ ಮಾನ್ಯ ಸದಸ್ಯರ ಪ್ರಸ್ತಾವನೆಯನ್ನು ವಿಸ್ತರಣಾ ಶಿಕ್ಷಣಾ ಪರಿಷತ್ ಮುಂದೆ ಚರ್ಚಿಸಿ, ಸೂಕ್ತ ನಿರ್ಧಾರಗಳನ್ನಾಧರಿಸಿ, ನಾಲವಾರದ ಸುತ್ತಮುತ್ತಲಿನ 100 ಎಕರೆ ಪ್ರದೇಶದ ಸ್ವಾಧೀನಕ್ಕೆ ಕ್ರಮವಿಡಲು ಮಂಡಳಿಯು ತೀರ್ಮಾನಿಸಿತು.

(ಕ್ರಮ : ವಿಸ್ತರಣಾ ನಿರ್ದೇಶಕರು)

**ಡಿ. ವ್ಯವಸ್ಥಾಪನಾ ಮಂಡಳಿಯ ಮಾನ್ಯ ಸದಸ್ಯರುಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿಪರ ಚಟುವಟಿಕೆ / ಕಾರ್ಯಕ್ರಮಗಳಿಗೆ ಆಹ್ವಾನಿಸುವ ಕುರಿತು.**

ಠರಾವು : ಸೂಕ್ತ ಚರ್ಚೆಯ ನಂತರ, ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗುವ ಅಭಿವೃದ್ಧಿಪರ ಚಟುವಟಿಕೆ / ಕಾರ್ಯಕ್ರಮಗಳ ಬಗ್ಗೆ (ಶಂಕುಸ್ಥಾಪನೆ, ಉದ್ಘಾಟನೆ ಇತ್ಯಾದಿ) ಮುಂಚಿತವಾಗಿ ಮಾಹಿತಿ ನೀಡಿ, ಚುನಾಯಿತ ಜನಪ್ರತಿನಿಧಿಗಳನ್ನು (ಮಾನ್ಯ ಮಂತ್ರಿಗಳು /ಸಂಸದರು / ಶಾಸಕರು / ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು) ಆಹ್ವಾನಿಸುವ ಸಂದರ್ಭದಲ್ಲಿ, ವ್ಯವಸ್ಥಾಪನಾ ಮಂಡಳಿಯ ಮಾನ್ಯ ಸದಸ್ಯರುಗಳನ್ನೂ ತಪ್ಪದೇ ಆಹ್ವಾನಿಸುವಂತೆ ಠರಾಯಿಸಲಾಯಿತು. (ಕ್ರಮ: ಕುಲಸಚಿವರು)

**ಇ. ವಿಶ್ವವಿದ್ಯಾಲಯದ ಪ್ರಮುಖ ಅಧಿಕಾರಿಗಳ ನೇಮಕಾತಿ ಕುರಿತು.**
ಮಾನ್ಯ ಸದಸ್ಯರಾದ ಡಾ॥ ಶೇಖರಗೌಡ ರವರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಜಾರಿಯಿರುವಂತೆ, ವಿಶ್ವವಿದ್ಯಾಲಯದ ಪ್ರಮುಖ ಅಧಿಕಾರಿಗಳ ನೇಮಕಾತಿಯ ಸಂದರ್ಶನ ತಜ್ಞಸಮಿತಿಯಲ್ಲಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರನ್ನು ಸೇರಿಸಿಕೊಳ್ಳುವ ಪ್ರಸ್ತಾಪವನ್ನು ಸಭೆಯ ಮುಂದೆ ಮಂಡಿಸಿದರು.

ಠರಾವು : ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರಮುಖ ಅಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳುವ ಸಂಬಂಧದ ಸಂದರ್ಶನ ತಜ್ಞಸಮಿತಿಯಲ್ಲಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರನ್ನು ಸೇರಿಸಿಕೊಳ್ಳುವ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈ ಬಗ್ಗೆ ಪ್ರಚಲಿತ ಪದ್ಧತಿಯನ್ನು ಅಭ್ಯಸಿಸಿ ಕ್ರಮವಿಡಲು ಕುಲಸಚಿವರಿಗೆ ಸೂಚಿಸುತ್ತಾ, ಸದರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಆದಷ್ಟು ಕೂಡಲೇ ಪೂರ್ಣಗೊಳಿಸುವಂತೆ ಠರಾಯಿಸಲಾಯಿತು.

(ಕ್ರಮ: ಕುಲಸಚಿವರು)

**ಎಫ್. ರಾಯಚೂರು ಕೃಷಿ ವಿಶ್ವವಿದ್ಯಾಲಯದ ಆವರಣವನ್ನು ಪ್ಲಾಸ್ಟಿಕ್ – ಮುಕ್ತಗೊಳಿಸುವ ಬಗ್ಗೆ.**

ಠರಾವು : ಸವಿವರ ಚರ್ಚೆಯ ನಂತರ ಕೃಷಿ ವಿಶ್ವವಿದ್ಯಾಲಯದ ಆವರಣವನ್ನು ತ್ಯಾಜ್ಯ ವಿಂಗಡನೆ, ಕಾಂಪೋಸ್ಟಿಂಗ್ ಹಾಗೂ ಮರು ಬಳಕೆ ಪದ್ಧತಿಗಳಿಂದ ತ್ಯಾಜ್ಯ ಮುಕ್ತ ಹಾಗೂ ಪ್ಲಾಸ್ಟಿಕ್ ಮುಕ್ತ ಮಾಡಲು ನಿರ್ಧರಿಸುತ್ತಾ, ಈ ದಿಸೆಯಲ್ಲಿ ಕಾರ್ಯವಹಿಸುತ್ತಿರುವ ಸೂಕ್ತ ಸಂಸ್ಥೆಗಳೊಂದಿಗೆ ವಿಶ್ವವಿದ್ಯಾಲಯವು ಒಡಂಬಡಿಕೆ ಮಾಡಿಕೊಳ್ಳಲು ಹಾಗೂ ಈ ಆಂದೋಲನದಲ್ಲಿ ಬೋಧಕ, ಬೋಧಕೇತರ, ವಿದ್ಯಾರ್ಥಿಗಳು ಹಾಗೂ ಸಮಾನ ಮನಸ್ಕ ಸಾರ್ವಜನಿಕರ ಪಾಲ್ಗೊಳ್ಳುವಂತೆ ಕ್ರಮವಿಡಲು ಠರಾಯಿಸಲಾಯಿತು.

(ಕ್ರಮ: ಕುಲಸಚಿವರು)

**ಜಿ. ವಿಶ್ವವಿದ್ಯಾಲಯದ ಆವರಣವನ್ನು ಕೃಷಿಯೇತರ / ಮನರಂಜನಾ / ರ್‍ಯಾಲಿ ಕಾರ್ಯಕ್ರಮಗಳಿಗೆ ಬಳಸಲು ಅನುಮತಿ ನಿರಾಕರಿಸುವ ಬಗ್ಗೆ.**

ಠರಾವು : ವಿಶ್ವವಿದ್ಯಾಲಯದ ಸ್ಟೇಡಿಯಂನ ಮೈದಾನ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶವನ್ನು ಕೃಷಿಯೇತರ / ಮನರಂಜನಾ / ರ್‍ಯಾಲಿ ಕಾರ್ಯಕ್ರಮಗಳಿಗೆ ಬಳಸಲು ಅನುಮತಿ ನೀಡಿದ್ದಲ್ಲಿ, ಮೈದಾನವು ಕ್ರೀಡಾ ಬಳಕೆಗೆ ಅನುಪಯುಕ್ತವಾಗುವ ಹಿನ್ನೆಲೆಯಲ್ಲಿ ಮತ್ತು ಈ ಕಾರ್ಯಕ್ರಮಗಳಿಂದ ಮೈದಾನಕ್ಕಾಗುವ ಹಾನಿಯನ್ನು ಗಮನದಲ್ಲಿರಿಸಿ, ಕೃಷಿಯೇತರ ಕಾರ್ಯಕ್ರಮಗಳಿಗೆ, ಮನರಂಜನಾ ಚಟುವಟಿಕೆಗಳಿಗೆ ಅಥವಾ

| | |
|---|---|
| | ಕೃಷಿಯೇತರ ರ್‍ಯಾಲಿ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾಲಯದ ಮೈದಾನ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶವನ್ನು ನೀಡದಿರಲು ಠರಾಯಿಸಲಾಯಿತು.<br>(ಕ್ರಮ: ಕುಲಸಚಿವರು / ಡೀನ್ (ವಿದ್ಯಾರ್ಥಿ ಕ್ಷೇಮಾಭಿವೃದ್ಧಿ) |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ/– 6–9–2017 | ಸಹಿ/– 6–9–2017 |
|---|---|
| (ಪಿ.ಎಂ. ಸಾಲಿಮಠ)<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | (ಗುತ್ತಿ ಜಂಬುನಾಥ)<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಗುತ್ತಿ ಜಂಬುನಾಥ)
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

32